ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತಕಛೇರಿ ವಿಳಾಸ ನಂ 29
ಕಾವೇರಿಗ್ರಾಮಿಣ ಬ್ಯಾಂಕ್‌ರಸ್ತೆ
ವಿಜಯನಗರ 2 ನೇಹಂತ ಮೈಸೂರು-570017
GSTIN - 29AACCC6636P1Z1Ph.: 08228 – 255331
ನಿಗಮ ಇ-ಮೇಲ್ :WWW.CESCMYSORE.ORG

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ರವರಕಛೇರಿಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಹೆಗ್ಗಡದೇವನಕೋಟೆ
email:aeeceschdkote@gmail.com


ಸಂಖ್ಯೆ:ಸಕಾನಿಇಂ(ವಿ)/ಹೆದೆಕೋ/ಸಇಂ(ತಾ)/2017-18/ 465-69

ದಿನಾಂಕ: 29-6-18

ದಿನಾಂಕ 27-06-2018 ರಂದುಬೆಳಗ್ಗೆ 11.00 ಗಂಟೆಗೆ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ಶ್ರೀ ಸೋಮರಾಜು ರವರ ಅಧ್ಯಕ್ಷತೆಯಲ್ಲಿ ನಡೆದ ಹೆಗ್ಗಡದೇವನಕೋಟೆ ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು**

1. ಶ್ರೀ ಬಸವಣ್ಣರವರು ಸಹಾಯಕ ಕಾರ್ಯನಿರ್ವಾಹಕಇಂಜಿನಿಯರ್(ವಿ)ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು
2. ಶ್ರೀ ಚಿದಂಬರ ಕೆ ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹೆಚ್.ಡಿ.ಕೋಟೆ
3. ಶ್ರೀ ಸಂದೀಪ್‌ಎಸ್ ಸಹಾಯಕಇಂಜಿನಿಯರ್(ತಾ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹೆಚ್.ಡಿ.ಕೋಟೆ
4. ಶ್ರೀ ಅರುಣ್‌ಕುಮಾರ್‌ಕಿರಿಯಇಂಜಿನಿಯರ್ (ವಿ) ಶಾಖಾಧಿಕಾರಿಗಳು ಹೆಚ್.ಡಿ.ಕೋಟೆ ಶಾಖೆ
5. ಶ್ರೀ ಪ್ರಸಾದ್ ಬಿ ಜಿ ಕಿರಿಯಇಂಜಿನಿಯರ್ (ವಿ) ಶಾಖಾಧಿಕಾರಿಗಳು ಆಲನಹಳ್ಳಿ ಶಾಖೆ
6. ಶ್ರೀ ಪ್ರೀತಮ್‌ಚಂದ್ರ ಕಿರಿಯಇಂಜಿನಿಯರ್ (ವಿ) ಶಾಖಾಧಿಕಾರಿಗಳು ಹಂಪಾಪುರ ಶಾಖೆ

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ)ರವರು ವಿದ್ಯುತ್ ಗ್ರಾಹಕ ಜನಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮೊದಲಿಗೆ ದಿನಾಂಕ 23-03-2018 ರ ಗ್ರಾಹಕರ ಸಂಪರ್ಕ ಸಭೆಯ ಅಹವಾಲುಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹೆಗ್ಗಡದೇವನಕೋಟೆ ಉಪವಿಭಾಗದ ಅಧಿಕಾರಿಗಳಿಂದ ಅಹವಾಲುವಾರು ಮಾಹಿತಿ ಪಡೆದು ಸಭೆಯಲ್ಲಿ ತಿಳಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ:-**

| ಕ್ರ.ಸಂ | ಅರ್ಜಿದಾರರ ಹೆಸರು,ವಿಳಾಸ ಮತ್ತುದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಅಮೀರ್ ಖಾನ್ ಪೈಲ್ವಾನ್‌ಕಾಲೋನಿ 9900616731 | • ನಮ್ಮ ಜಮೀನಿನಲ್ಲಿರುವ ಕಂಭ ಸ್ಥಳಾಂತರಿಸಲು ಕೋರಿರುತ್ತಾರೆ<br>• ವಿದ್ಯುತ್ ಸರಬರಾಜಿನಲ್ಲಿ ಪದೆ ಪದೆ ವತ್ಯಾಯ ಉಂಟಾಗುತ್ತಿದ್ದು ಸರಿಪಡಿಸುವಂತೆ ಕೋರಿರುತ್ತಾರೆ. | • ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ವಯಂನಿರ್ವಹಣೆ ಯೋಜನೆಯಾಡಿಯಲ್ಲಿ ಕಾಮಗಾರಿ ನಿರ್ವಹಿಸಿಕೊಳ್ಳಲು ಗ್ರಾಹಕರಿಗೆ ತಿಳಿಸಿದರು<br>• ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) |

| | | | |
|---|---|---|---|
| | | | ರವರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 2. | ಜೆ ಬಾಲರಾಜು ನಾಗನಹಳ್ಳಿ 9845750765 | • ತಾರಕ ಫೀಡರ್ ವಿದ್ಯುತ್ ಸರಬರಾಜಿನಲ್ಲಿ ಪದೆ ಪದೆ ವತ್ಯಾಯ ಉಂಟಾಗುತ್ತಿದ್ದು ಸರಿಪಡಿಸುವಂತೆ ಕೋರಿರುತ್ತಾರೆ.<br>• ತಮ್ಮ ಪರಿವರ್ತಕಕ್ಕೆ ಅಳವಡಿಸಿಕೊಂಡಿರುವ ಅಕ್ರಮ ಪಂಪ್‌ಸೇಟ್‌ಗಳನ್ನು ತೆಗೆಸುವಂತೆ ಮನವಿ ಮಾಡಿದರು | • ಪ್ರಭಾರ ಅಧೀಕ್ಷಕಇಂಜಿನಿಯರ್(ವಿ)ರವರು ತಾರಕ ಫಿಡರ್ ಜಂಗಲ್‌ಕಟಿಂಗ್ ಮಾಡುವಂತೆ ಶಾಖಧಿಕಾರಿಗಳಿಗೆ ತಿಳಿಸಿದರು<br>• ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 3. | ಕೆ.ಜಿ.ಹಳ್ಳಿ ಗ್ರಾಮಸ್ಥರು | ಕೆ.ಜಿ.ಹಳ್ಳಿಯ ಕುಡಿಯುವ ನೀರಿನ ಸ್ಥಾವರವು ಐಪಿ ಫೀಡರ್‌ನಲ್ಲಿದ್ದು ನಿರಂತರಜ್ಯೋತಿಗೆ ವರ್ಗಾಯಿಸುವಂತೆ ಕೋರಿರುತ್ತಾರೆ | ಶಾಖಧಿಕಾರಿಗಳು ಈ ಬಗ್ಗೆ ಈಗಾಗಲೇ ಅಂದಾಜು ಪಟ್ಟಿ ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸಿರುವುದಾಗಿ ತಿಳಿಸಿದರು ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ವಿಭಾಗಿಯ ಸಕಾನಿಇಂ ರವರಿಗೆ ಕ್ರಮವಹಿಸುವಂತೆ ತಿಳಿಸಿದರು |
| 4. | ಚಲುವರಾಯಸ್ವಾಮಿ ಹೆಚ್.ಡಿ.ಕೋಟೆ 8970471789 | ತಮ್ಮ ಮನೆಯ ಮೇಲೆ ಹಾದುಹೋಗಿರುವ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸುವಂತೆ ಕೋರಿರುತ್ತಾರೆ. | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ವಯಂನಿರ್ವಹಣೆ ಯೋಜನೆಯಾಡಿಯಲ್ಲಿ ಕಾಮಗಾರಿ ನಿರ್ವಹಿಸಿಕೊಳ್ಳಲು ಗ್ರಾಹಕರಿಗೆ ತಿಳಿಸಿದರು |
| 5. | ಶಿವಣ್ಣ ಕಬ್ಬುಬೆಳೆಗಾರರ ಸಂಘದ ಅಧ್ಯಕ್ಷರು 8971874346 | ವೋಲ್ಟೇಜ್ ಸಮಸ್ಯೆ ಇದ್ದು ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿರುತ್ತಾರೆ. | ಪ್ರಭಾರ ಅಧೀಕ್ಷಕಇಂಜಿನಿಯರ್(ವಿ)ರವರುಸ್ಥಳಪರಿಶೀಲಿಸಿಕ್ರಮಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 6. | ನಾಗರಾಜು ಯಿರಹಳ್ಳಿಕಾವಲ್ 9800232853 | ಯಿರಹಳ್ಳಿಯಲ್ಲಿ ಬಾಗಿರುವ ಕಂಬಗಳನ್ನು ಸರಿಪಡಿಸುವಂತೆ ಕೋರಿರುತ್ತಾರೆ | ಪ್ರಭಾರ ಅಧೀಕ್ಷಕಇಂಜಿನಿಯರ್(ವಿ)ರವರು ಸ್ಥಳಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 7. | ಮಹೇಶ್ ಗ್ರಾಮ ಪಂಚಾಯ್ತಿ ಸದಸ್ಯರು | ಕೆ ಎಡತೋರೆ ಗೌರಮ್ಮ ಪರಿವರ್ತಕವು ವಿಫಲಗೊಂಡಿದ್ದು ಬದಲಾಯಿಸಿಕೊಡುವಂತೆ ಕೋರಿರುತ್ತಾರೆ | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ವಿಭಾಗಿಯ ಸಕಾನಿಇಂ ರವರಿಗೆ ಕ್ರಮವಹಿಸುವಂತೆ ತಿಳಿಸಿದರು |
| 8. | ಹೊನ್ನೇಗೌಡ ಮಾದಪುರ 9980800767 | UNIP ಯೋಜನೆಯಾಡಿಯಲ್ಲಿ ಪರಿವರ್ತಕ ಅಳವಡಿಸಿದ್ದು ಇದುವರೆಗೂ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲ | ಪ್ರಭಾರ ಅಧೀಕ್ಷಕಇಂಜಿನಿಯರ್(ವಿ)ರವರು ಕ್ರಮಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 9. | ಕೃಷ್ಣಮೂರ್ತಿ ಮುಷ್ಕೆರೆ 9980326760 | ಮುಷ್ಕೆರೆ 100 ಕೆವಿಎ ಪೂವಮ್ಮ ಪರಿವರ್ತಕವು ವಿಫಲಗೊಂಡಿದ್ದು ಬದಲಾಯಿಸಿಕೊಡುವಂತೆ ಕೋರಿರುತ್ತಾರೆ | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ವಿಭಾಗಿಯ ಸಕಾನಿಇಂ ರವರಿಗೆ ಕ್ರಮವಹಿಸುವಂತೆ ತಿಳಿಸಿದರು |

| | | | |
|---|---|---|---|
| [illegible] | ರಾಮಸ್ವಾಮಿ<br>9880908007 | ತಮ್ಮ ಠೇವಣಿ ಮೊತ್ತವನ್ನು ಹಿಂಪಡೆಯುವ ಬಗ್ಗೆ ವಿವರವನ್ನು ಕೇಳಿರುತ್ತಾರೆ | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ವಿವರಿಸಿರುತ್ತಾರೆ |
| 11. | ವಿಜಯನಂದನ<br>ಯರಹಳ್ಳಿ ಕಾವಲ್<br>9480052554 | ವಿದ್ಯುತ್ ಸರಬರಾಜಿನಲ್ಲಿ ಪದೆ ಪದೆ ವತ್ಯಾಯ ಉಂಟಾಗುತ್ತಿದ್ದು ಸರಿಪಡಿಸುವಂತೆ ಕೋರಿರುತ್ತಾರೆ. | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 12. | ಪ್ರಸನ್ನಕುಮಾರ್<br>ಮುಷ್ಕೆರೆ | ತೋಟದ ಮನೆಗಳಿಗೆ ನಿರಂತರಜ್ಯೋತಿ ವಿದ್ಯುತ್ ಸರಬರಾಜು ನೀಡುವಂತೆ ಕೋರಿರುತ್ತಾರೆ | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 13. | ಮಲ್ಲೇಗೌಡ<br>ಕೆ ಎಡತೋರೆ | ಪರಿವರ್ತಕವು ವಿಫಲಗೊಂಡಿದ್ದು ಬದಲಾಯಿಸಿಕೊಡುವಂತೆ ಕೋರಿರುತ್ತಾರೆ | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ವಿಭಾಗಿಯ ಸಕಾನಿಇಂ ರವರಿಗೆ ಕ್ರಮವಹಿಸುವಂತೆ ತಿಳಿಸಿದರು |

ಸಭೆಯ ಕೊನೆಯಲ್ಲಿ ಪ್ರಭಾರ ಅಧಿಕ್ಷಕ ಇಂಜಿನಿಯರ್(ವಿ)ರವರು ವಿದ್ಯುತ್ ಗ್ರಾಹಕರಿಂದ ಕೇಳಿಬಂದಂತಹ ದೂರುಗಳು ಹಾಗೂ ಕುಂದುಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಾಮನುಸಾರ ಕ್ರಮ' ಕೈಗೊಂಡು ತೆಗೆದುಕೊಂಡಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಹೆಚ್.ಡಿ.ಕೋಟೆ.

ಪ್ರತಿಗಳು:-

1. ಮಾನ್ಯ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ),ಚಾವಿಸನಿನಿ ನಿಗಮ ಕಛೇರಿ ಮೈಸೂರುರವರ ಮಾಹಿತಿಗಾಗಿ
2. ಮಾನ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),ಚಾವಿಸನಿನಿ ನಿಗಮ ಕಛೇರಿ ಮೈಸೂರುರವರ ಮಾಹಿತಿಗಾಗಿ
3. ಮುಖ್ಯಇಂಜಿನಿಯರ್ (ವಿ), ಚಾವಿಸನಿನಿ, ವಲಯಕಛೇರಿ ಮೈಸೂರುರವರ ಮಾಹಿತಿಗಾಗಿ
4. ಅಧೀಕ್ಷಕಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರುರವರ ಮಾಹಿತಿಗಾಗಿ
5. ಕಾರ್ಯನಿರ್ವಾಹಕಇಂಜಿನಿಯರ್(ವಿ)ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗಿಯಕಛೇರಿ,ಹುಣಸೂರುರವರ ಮಾಹಿತಿಗಾಗಿ.
6. ಕಛೇರಿ ಪ್ರತಿ.


ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಮೈಸೂರು.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಹೆಗ್ಗಡದೇವನಕೋಟೆ ಉಪವಿಭಾಗ
ವ್ಯಾಪ್ತಿಯ ವಿದ್ಯುತ್ ಗ್ರಾಹಕರ
ಜನ ಸಂಪರ್ಕ ಸಭೆ
ದಿನಾಂಕ: 27-06-2018
SO HDK


ಹೆಗ್ಗಡದೇವನಕೋಟೆ ಉಪವಿಭಾಗ
ವ್ಯಾಪ್ತಿಯ ವಿದ್ಯುತ್ ಗ್ರಾಹಕರ
ಜನ ಸಂಪರ್ಕ ಸಭೆ
SO HDK